**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 252/2018

ಪಿಡಬ್ಲು :7 ಸಿಡಬ್ಲು : 8

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಸಂತೋಷ ಗುಳವಣಿ |
| ತಂದೆಯ ಹೆಸರು | : ಶ್ರೀ. ಅಪ್ಪಾಸಾಬ |
| ವಯಸ್ಸು | : 39 ವರ್ಷ |
| ಉದ್ಯೋಗ | : ಕೇಬಲ್ ನೇಟವರ್ಕ ಆಪರೇಟರ |
| ವಾಸ್ತವ್ಯ | : ಮೊಳವಾಡ, |
| ದಿನಾಂಕ | : 02-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು BRDS ( Bhima Riddhi Digital Service) ಇವರಿಂದ ನಾನು ಕೇಬಲ ನೆಟವರ್ಕ ಪರವಾನಿಗೆ ಪಡೆದು 17 ವರ್ಷಗಳಿಂದ ಮೊಳವಾಡ ಗ್ರಾಮದಲ್ಲಿ ಕೇಬಲ ನೆಟವರ್ಕ ನಡೆಸುತ್ತಿದ್ದೇನೆ. ಚಾಸಾ-1 ಸಂಗಪ್ಪ ಕಾಂಬಳೆ ಸಹ ಕೇಬಲ ನೆಟವರ್ಕ ನಡೆಸುತ್ತಾರೆ. ಚಾಸಾ-6 ನೀತಿನ ಕಾಂಬಳೆ, ಚಾಸಾ-7 ಸುರೇಶ ಡಾಕಾನಾಯಕ ನನಗೆ ಗೊತ್ತಿರುತ್ತಾರೆ. ಅವರಿಬ್ಬರು ಇಂಗಳಿಯಲ್ಲಿ ಕೇಬಲ ನೆಟವರ್ಕ ನಡೆಸುತ್ತಾರೆ. ಚಾಸಾ-10 ವೀರುಪಾಕ್ಷಿ ಕುಂಬಾರ ಇವರು ಸಹ ಊಗಾರ ಅಲ್ಲಿ ಕೇಬಲ ನೆಟವರ್ಕ ನಡೆಸುತ್ತಾರೆ.

2. ಚಾಸಾ-9 ವಿನೋದ ಪಾಟನಕರ ನನಗೆ ಗೊತ್ತಿರುತ್ತಾರೆ. ಆರೋಪಿತರು ನನಗೆ ಗೊತ್ತಿರುತ್ತಾರೆ. ದಿನಾಂಕಃ 15-09-2018 ರಂದು ರಾತ್ರಿ 10.30 ರಿಂದ 11.00 ಗಂಟೆಗೆ ಕೇಬಲ ವಾಯರ ಕಟ್ ಆಗಿದೆ ಎಂದು ಸಂಗಪ್ಪ ನನಗೆ ಹೇಳಿದರು. ನಾನು ಮೊಳವಾಡ ಗ್ರಾಮದಿಂದ ಕುಸನಾಳ ಗ್ರಾಮಕ್ಕೆ ನೋಡಲು ಹೋಗಿದ್ದೇನು. ನಾನು ಮತ್ತು ಸಂಗಪ್ಪ ಕೇಬಲ ವಾಯರ ಕಟ್ ಆಗಿರುವುದನ್ನು ನೋಡಲು ಉಗಾರ ಕಡೆಗೆ ಹೋಗಿದ್ದೇವು.

ಅದಕ್ಕೂ ಮೊದಲು ಸಂಗಪ್ಪ ಅವರು ಉಗಾರ ಕೇಬಲ ನೆಟವರ್ಕ ನವರಿಗೆ ಅಂದರೆ ಚಾಸಾ-10 ವೀರುಪಾಕ್ಷಿ ಕುಂಬಾರ ಅವರಿಗೆ ಪೋನ ಮೂಲಕ ವೈಯರ ಕಟ್ ಆಗಿರುವ ವಿಚಾರ ಹೇಳಿದ್ದರು.

3. ವೈಯರ ಕಟ್ ಮಾಡಿದಂತಹ ವ್ಯಕ್ತಿಗಳು ಉಗಾರನ ಹತ್ತಿರ ಇರುವ ರತ್ನಾ ಗಾರ್ಡನ ಬಳಿ ಸಿಕ್ಕಿರುತ್ತಾರೆ ಎಂದು, ಅಲ್ಲಿರುವ ಒಂದು ವಿದ್ಯುತ್ ಕಂಬದಲ್ಲಿ ಹಾಕಿದ್ದ ಕೇಬಲ ವಾಯರನ್ನು ಒಬ್ಬ ವ್ಯಕ್ತಿ ಕತ್ತರಿಸುತ್ತಿದ್ದಾನೆ ಎಂದು ಇನ್ನೊಬ್ಬ ವ್ಯಕ್ತಿ ಕೆಳಗೆ ನಿಂತಿದ್ದಾನೆ ಎಂದು ಹೇಳಿದರು. 3 ಜನ ವ್ಯಕ್ತಿಗಳು ನನ್ನನ್ನು ತಳ್ಳಿ ಮೋಟರ ಸೈಕಲ ಮೇಲೆ ಕುಸನಾಳ ಕಡೆಗೆ ಬರುತ್ತಿದ್ದಾರೆ ಎಂದು ಅವರನ್ನು ದಾರಿಯಲ್ಲಿ ಹಿಡಿಯಿರಿ ಎಂದು ಪೋನ ಮಾಡಿ ಹೇಳಿದರು. ನಾವು ಚಾಸಾ-7 ಸುರೇಶ ಅವರಿಗೆ ಪೋನ ಮಾಡಿ ವೈಯರ್ ಕತ್ತರಿಸಿದಂತ ವ್ಯಕ್ತಿಗಳು ಸಿಕ್ಕರುತ್ತಾರೆ ಎಂದು ಲಕ್ಷ್ಮಿ ಗುಡಿ ರಸ್ತೆ ಹತ್ತಿರ ಬನ್ನಿ ಎಂದು ನಾವು ಹೇಳಿದೇವು.ಆ ವೇಳೆಗೆ ಸುರೇಶ ಅವರಿಗೆ ಪೋನ ಮಾಡಿ ನಮಗೆ ಅವರು ಸಿಕ್ಕಿರುವುದಿಲ್ಲ ತಪ್ಪಿಸಿಕೊಂಡು ಹೋಗಿದ್ದಾರೆ ನೀವು ಅವರನ್ನು ಹಿಡಿಯಿರಿ ಎಂದು ನಾವು ಪೋನ ಮಾಡಿ ಹೇಳಿದೇವು ಮತ್ತು ನಾವು ಬೆನ್ನು ಹತ್ತುತ್ತಿದ್ದೇವು ಆ ಸಮಯಕ್ಕೆ ಸುರೇಶ ಅವರು ನನಗೆ ಪೋನ ಮಾಡಿ ಆರೋಪಿತು ನನಗೆ ಕೆರೆ ಹತ್ತಿರ ಸಿಕ್ಕಿರುತ್ತಾರೆ ಎಂದು ಹೇಳಿದರು, ನಾವು ಅಲ್ಲಿಗೆ ಹೋದೆವು. ಆ ಪೈಕಿ ಒಬ್ಬರ ಕೈಯಲ್ಲಿ ರಾಡ ಇತ್ತು ಅದರಿಂದ ಸುರೇಶನ ಕೈ ಬೆರಳಿಗೆ ಹೊಡೆದರು ಮತ್ತು ತಮ್ಮ ಮೋಟರ ಸೈಕಲನಿಂದ ಗುದ್ದಿಸಿದ್ದರಿಂದ ನೀತಿನ ಕಾಂಬಳೆ ಅವರ ಕಾಲಿಗೆ ಗಾಯ ಆಯಿತು. ಸಂಗಪ್ಪ ಅವರಿಗೆ ಎದೆಗೆ ಮತ್ತು ಬೆನ್ನಿಗೆ ಹೊಡೆದರು.

4. ಸ್ಥಳಕ್ಕೆ ವಿನೋದ ಪಾಟನಕರ ಅವರು ಬಂದಿದ್ದು ನಾನು ಮತ್ತು ಅವರು ಸೇರಿ ಜಗಳ ಬಿಡಿಸಿದೇವು. ಅವರು ನಮಗೆ ನೀವು ಯಾವ ರೀತಿ ಕೇಬಲ ನೇಟವರ್ಕ ನಡೆಸುತ್ತಿರಾ ನೋಡುತ್ತೇವೆ ಎಂದು ನಮಗೆ ಜಾತಿ ಹೆಸರು ಹಿಡಿದು ಅವಾಚ್ಯವಾಗಿ ಬೈದರು. ರಾಜು, ಸಂಜು ಎನ್ನುವವರು ವೈಯರ ಕಟ್ ಮಾಡಲು ನಮಗೆ ಹಣ ನೀಡಿದ್ದಾರೆಂದು ಹೇಳಿದರು. ನಮ್ಮ ಹಿಂದೆ ಅಶೋಕ ದೇವರಕರ ಎನ್ನುವವರು ಇದ್ದಾರೆ ಎಂದು ಸಹ ಹೇಳಿದರು. ನಾನು

ಹೆಸರು ಕೇಳಲಾಗಿ ಸೋಮನಾಥ, ಜ್ಞಾನೇಶ್ವರ, ಸಂದೀಪ ಎಂದು ತಮ್ಮ ಹೆಸರನ್ನು ನಮಗೆ ಹೇಳಿದರು.

5. ರಾಡನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ರಾತ್ರಿಯಲ್ಲಿ ಆರೋಪಿತರು ತಂದಿದ್ದ ಮೋಟರ ಸೈಕಲ ಕೆಎ-23/3097. ನಂತರ ನಾವು ಪೋಲಿಸ ಠಾಣೆಗೆ ಹೋಗಿದ್ದೇವು ಅವರು ಆಸ್ಪತ್ರೆಗೆ ಹೋಗಿ ತೋರಿಸಿಕೊಳ್ಳಲು ಹೇಳ್ದಿರಿಂದ ನಾವು ಸಂಗಪ್ಪ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಮು.ಮಾ-2 ಮೋಟರಸೈಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಸಿ.ಪಿ ವಕೀಲರಿಂದ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ರೂ.1000/- ಖರ್ಚನ್ನು ನೀಡುವ ಶರತ್ತಿನೊಂದಿಗೆ, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.